ಕಡಿಮೆಯಾಗುತ್ತಿರುವುದರಿಂದ LPG ಸಿಲಿಂಡರ್ ಹೊಂದಿರುವವರಿಗೂ ಸೀಮೆಎಣ್ಣೆ ವಿತರಿಸುವುದು ಕಷ್ಟಸಾಧ್ಯ. LPG ಸಿಲಿಂಡರ್ ಹೊಂದದೇ ಇರುವ ಪಡಿತರ ಚೀಟಿದಾರರಿಗೆ ಮಾತ್ರ ವಿತರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರವ ಹೆಚ್ಚಿನ ಪ್ರಮಾಣದಲ್ಲಿ ಸೀಮೆಎಣ್ಣೆ ಪೂರೈಸಿದಲ್ಲಿ LPG ಸಿಲಿಂಡರ್ ಹೊಂದಿದ ಎಲ್ಲರಿಗೂ ಸೀಮೆಎಣ್ಣೆ ವಿತರಿಸಲು ಕ್ರಮವಹಿಸಲಾಗುವುದು.

ಸಂ. ಅನಾಸ 241 ಡಿಆರ್‌ಎ 2012

(ಡಿ.ಎನ್. ಜೀವರಾಜ್)
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು)

ಕರ್ನಾಟಕ ವಿಧಾನ ಸಭೆ

431

ಶ್ರೀ ಮಂಜುನಾಥ್ ಹೆಚ್. ಪಿ.

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ವಿವಿಧ ಯೋಜನೆಗಳಡಿ 2008–09ನೇ ಸಾಲಿನಿಂದ 2012–13ನೇ ಸಾಲಿನವರೆಗೆ ಮಂಜೂರಾದ ಮನೆಗಳು;

(ಯೋಜನಾವಾರು ವಿವರ ನೀಡುವುದು)

ಆ) ಗುರಿಯನ್ವಯ ಪ್ರಗತಿ ಸಾಧಿಸಲಾಗಿದೆಯೇ ವಿವರ ನೀಡುವುದು

ಇ) ಸಾಧಿಸಲಾಗದಿದ್ದಲ್ಲಿ ಕಾರಣವೇನು; ವಿವರ ನೀಡುವುದು

ಈ) ಕಳೆದ ಮೂರು ವರ್ಷಗಳಿಂದ ಮನೆ ನಿರ್ಮಾಣಕ್ಕಾಗಿ ವಿವಿಧ ಯೋಜನೆಗಳಡಿ ಬಿಡುಗಡೆಗೊಂಡ ಸರ್ಕಾರಿ ಸಹಾಯಧನವೆಷ್ಟು;

ಉ) ಮಂಜೂರಾದ ಮನೆಗಳನ್ನು ವಸತಿ ರಹಿತರಿಗೆ ಸಮರ್ಪಕವಾಗಿ ನೀಡಲಾಗಿದೆಯೇ

ಊ) ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ನಿರ್ಮಾಣದ ಹಣ ಬಿಡುಗಡೆ ಪ್ರಕ್ರಿಯೆಯು ವಿಳಂಬವಾಗುತ್ತಿರಲು ಕಾರಣವೇನು?

ಮಾನ್ಯ ವಸತಿ ಸಚಿವರು.

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ವಿವಿಧ ವಸತಿ ಯೋಜನೆಗಳಡಿ 2008–09 ನೇ ಸಾಲಿನಿಂದ 2012–13ನೇ ಸಾಲಿನವರೆಗೆ 22498 ಮನೆಗಳು ಮಂಜೂರಾಗಿದೆ.

ಯೋಜನಾವಾರು ಹಾಗೂ ವರ್ಷವಾರು ಮಂಜೂರಾದ ಮನೆಗಳ ವಿವರಗಳನ್ನು "ಅನುಬಂಧ–1" ದಲ್ಲಿ ಲಗತ್ತಿಸಿದೆ.

ಆ) ಇಲ್ಲ

ಇ) ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳನ್ನು ನಿಗದಿತ ಅವಧಿಯೊಳಗೆ ಆಯ್ಕೆ ಮಾಡಿ ನಿಗಮದಿಂದ ಅನುಮೋದನೆ ಪಡೆದುಕೊಂಡಿಲ್ಲ.

ಈ) ಕಳೆದ ಮೂರು ವರ್ಷಗಳಿಂದ ಹುಣಸೂರು ತಾಲ್ಲೂಕಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ರೂ. 17.80 ಕೋಟಿ ರೂ. ಸರ್ಕಾರದ ಸಹಾಯಧನವನು ಬಿಡುಗಡೆ ಮಾಡಲಾಗಿದ್ದು ಯೋಜನಾವಾರು ಮತ್ತು ವರ್ಷವಾರು ವಿವರಗಳನ್ನು "ಅನುಬಂಧ–2" ದಲ್ಲಿ ನೀಡಲಾಗಿದೆ.

ಉ) ಹೌದು.

ಊ) ಬಸವ ವಸತಿ ಯೋಜನೆಯಡಿಯಲ್ಲಿ ಆಯಾ ಗ್ರಾಮ ಪಂಚಾಯ್ತಿಗಳ ಅಭಿವೃದ್ಧಿ ಅಧಿಕಾರಿಗಳು/ ಕಾರ್ಯದರ್ಶಿಗಳು ಆನ್‌ಲೈನ್‌ನಲ್ಲಿ ಸಲ್ಲಿಸಲಾಗುತ್ತಿರುವ ಪ್ರಗತಿ ವರದಿಯ ಆಧಾರದ ಮೇಲೆ ಮತ್ತು ಈ ಪ್ರಗತಿಯನ್ನು ತಾಲ್ಲೂಕು ನೋಡಲ್ ಅಧಿಕಾರಿಗಳು ಜಿ.ಪಿ.ಎಸ್ ಮೂಲಕ ದೃಢೀಕರಿಸಿದ ನಂತರ ನೇರವಾಗಿ ಅನುದಾನವನ್ನು ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗುತ್ತಿದೆ ನಿಗಮದಿಂದ ಅನುದಾನವನ್ನು ಪ್ರತಿ ವಾರಕ್ಕೊಮ್ಮೆ ಬಿಡುಗಡೆ ಮಾಡಲಾಗುತ್ತಿರುವುದರಿಂದ ಫಲಾನುಭವಿಗಳ ಖಾತೆಗೆ ಅನುದಾನ ಬಿಡುಗಡೆ ಮಾಡುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ

ಸಂಖ್ಯೆ ಳ ವಇ 191 ಹೆಚ್‌ಎಎಂ 2012

(ವಿ.ಸೋಮಣ್ಣ)
ವಸತಿ ಸಚಿವರು

KARNATAKA LEGISLATIVE ASSEMBLY
431

Sri Manjunath. H.P.

A) How many houses have been sanctioned under various housing schemes to Hunsur taluka of Mysore district for the year 2008-09 to 2012-13; (provide scheme – wise details)

B) Whether the achievement has been done against the target issued;

C) If not achieved, give reasons for the same;

D) What is the Government Subsidy amount released in the last 3 years for constrction of houses under various schemes;

E) Whether the sactioned houses have been given to the houseless people;

F) What is the reason for delay in disburbsement of funds to the houses sanctioned under Basava Housing Scheme;

Minister for Housing

A) A total of 22498 houses have been sanctioned under various housing schemes to Hunsur taluka of Mysore district for the year 2008-09 to 2012 – 13.
Sscheme – wise and year – wise details are at Annexure 1.

B) No.

C) The selection of beneficiaries and approval of the same from the Corporation as against the larget has not been taken within the prescribed time.

D) An amount of Rs. 17.80 crores subsidy has been released to Hunsur Taluk in the last 3 years. The details are furnished at Annexure – 2

E) Yes

F) Under Basava Housing Scheme funds are released directly to the beneficiaries after online updation of progress report by the PDOs and the same is authenticated by TNO

through GPS system. Corporation is releasing funds on weekly basis. Therefore, there is no delay in disbursement of funds.
No. DOH 191 HAM 2012

(V. Somanna)
Minister for Housing

ಕರ್ನಾಟಕ ವಿಧಾನ ಸಭೆ

828

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ

ಅ) ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ವಾಸಿಸಲು ಸೂಕ್ತವಾದ ಮನೆಗಿಲ್ಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ವಾಸಿಸಲು ಅಗತ್ಯವಿರುವ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಸರ್ಕಾರದ ಕ್ರಮಗಳೇನು? (ವಿವರ ಒದಗಿಸುವುದು)

ಮಾನ್ಯ ಮುಖ್ಯ ಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿ ಪೊಲೀಸ್ ಸಿಬ್ಬಂದಿಗಳ ಬಲ ಒಟ್ಟು 39 ಇದ್ದು, ವಾಸ್ತವ ಬ 37 ಇರುತ್ತದೆ. ಈ ಕ್ಷೇತ್ರದ ಪೊಲೀಸ್ ಸಿಬ್ಬಂದಿಗಳಿಗೆ ಈಗಾಗಲೇ 22 ವಸತಿ ಗೃಹಗಳನ್ನು ಒದಗಿಸಲಾಗಿದ್ದು, ಮುಂಬರುವ ವರ್ಷದಲ್ಲಿ ವಸತಿ ಗೃಹಗಳನ್ನು ನಿರ್ಮಿಸುವಾಗ ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಇರುವ 15 ವಸತಿ ಗೃಹಗಳನ್ನು ನಿರ್ಮಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ : ಹೆಚ್‌ಡಿ 144 ಪಿಓಪಿ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ